ನಗರ ಸಮುದಾಯ ಯೋಜನೆಯಡಿಯಲ್ಲಿ 250 ಗ್ರೂಪ್‌ಗಳು ಬಂದಿವೆ, ಈ 250 ಗ್ರೂಪ್‌ಗಳು ನಮ್ಮ ಯೋಜನೆಯಡಿಯಲ್ಲಿ ಬಂದಿರುವುದರಿಂದ ಅವರಿಗೂ 15 ಸಾವಿರ ಸುತ್ತುನಿಧಿಯನ್ನು ಕೊಡತಕ್ಕಂಥ ಕೆಲಸ ಮಾಡಬಹುದೆ?

ಶ್ರೀ ಡಿ.ಕೆ. ಶಿವಕುಮಾರ್ : ಅದನ್ನು ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು : ಮುಂದಿನ ಪ್ರಶ್ನೆ ಶ್ರೀ ಎ.ಎಸ್. ಗುರುಸ್ವಾಮಿ, ಅವರು ಇಲ್ಲ. ಮುಂದಿನ ಪ್ರಶ್ನೆ ಮಾನ್ಯ ಶಂಕರ್ ಲಿಂಗೇಗೌಡರವರು. ತಾವು ಕೇಳೀ..

ಸ್ವಯಂ ನಿವೃತ್ತಿ ಬಯಸಿ ಸಲ್ಲಿಸಿದ ಅರ್ಜಿಗಳನ್ನು ವಿಲೇವಾರಿ ಮಾಡುವ ಬಗ್ಗೆ

442 (3873) : ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಸರ್ಕಾರ ವಿವಿಧ ಇಲಾಖೆಗಳಲ್ಲಿ ಸ್ವಯಂ ನಿವೃತ್ತಿ ಬಯಸಿ ಅರ್ಜಿ ಸಲ್ಲಿಸಿದ್ದವರ ಪೈಕಿ ಬಾಕಿ ಇರುವ ಅರ್ಜಿಗಳೆಷ್ಟು?

ಆ) ಈ ಅರ್ಜಿಗಳು ಎಷ್ಟೆಷ್ಟು ಅವಧಿಯಿಂದ ಯಾವ ಕಾರಣಕ್ಕಾಗಿ ಬಾಕಿ ಇವೆ;

ಇ) ಈ ಅರ್ಜಿಗಳನ್ನು ಕೂಡಲೇ ವಿಲೇವಾರಿ ಮಾಡಿ ಸಂಬಂಧಿಸಿದವರ ಕೋರಿಕೆಯನ್ನು ಈಡೇರಿಸುವ ವಿಚಾರದಲ್ಲಿ ಸರ್ಕಾರದ ಮುಂದಿನ ಕ್ರಮಗಳೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು):

ಅ) 197 (ಕಾನೂನು ಮತ್ತು ಕಂದಾಯ ಇಲಾಖೆಗಳನ್ನು ಹೊರತುಪಡಿಸಿ)

ಆ) ಒಂದು ತಿಂಗಳಿನಿಂದ ಮೂರು ವರ್ಷಗಳವರೆಗೆ ಬಾಕಿ ಇವೆ. ಇಲಾಖಾ ವಿಚಾರಣೆ ಬಾಕಿಯಿರುವುದರಿಂದ ಬೇಬಾಕಿ ಪತ್ರ ಬರೆಬೇಕಾಗಿರುವುದರಿಂದ, ಮಹಾಲೇಖಪಾಲಕರಿಂದ ಅರ್ಹತಾ ಸೇವಾ ದೃಢೀಕರಣಪತ್ರ ಬಾಕಿಯಿರುವುದರಿಂದ, ಮುಂತಾದ ಕಾರಣಗಳಿಂದ ಬಾಕಿ ಇದೆ.

ಇ) ಸ್ವಯಂ ನಿವೃತ್ತಿ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ಅರ್ಹ ಪ್ರಕರಣಗಳನ್ನು ಆದಷ್ಟು ತ್ವರಿತವಾಗಿ ಇತ್ಯರ್ಥಪಡಿಸಲಾಗುವುದು.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ನಿರಾಶೆಯಾಗಿರತಕ್ಕಂಥವರು ನಿವೃತ್ತಿ ಬಯಸುತ್ತಾರೆ. ಕಾನೂನು ಮತ್ತು ಕಂದಾಯ ಇಲಾಖೆಗಳನ್ನು ಹೊರತುಪಡಿಸಿ 197 ಎಂದು ಕೊಟ್ಟಿದ್ದಾರೆ. ಉಳಿದವುಗಳನ್ನು ಏಕೆ ನಿಖರವಾಗಿ ಕೊಟ್ಟಿಲ್ಲ? ನಿವೃತ್ತಿ ಬಬಯಸುವುದು ಏಕೆ? ಮಕ್ಕಳನ್ನು ಮದುವೆ ಮಾಡುವುದಕ್ಕೆ, ಅಥವಾ ಮಕ್ಕಳನ್ನು ಓದಿಸುವುದಕ್ಕೆ ಸಾಲ-ಸೋಲ ಮಾಡಿ ಕಷ್ಟದಿಂದ ಮಕ್ಕಳನ್ನು ಓದಿಸುವುದಕ್ಕಾಗಿ ನಿವೃತ್ತಿ ತೆಗೆದುಕೊಳ್ಳುತ್ತಿದ್ದಾರೆ. ಅವರ ಅರ್ಜಿಗಳನ್ನು ಜಾಗ್ರತೆಯಾಗಿ ವಿಲೇವಾರಿ ಮಾಡಲಿಲ್ಲ; ಮತ್ತು ನಿಖರವಾದ ಉತ್ತರವನ್ನು ಕೊಡಲಿಲ್ಲ. ಇದು ಹಾರಿಕೆ ಉತ್ತರದ ರೀತಿ ಇದೆ. ಆ ದಿನ ನಾನು ಗಲಾಟೆ ಮಾಡಿದಾಗ, ಈ ಪ್ರಶ್ನೆಗೆ ಉತ್ತರ ಬರುವುದಕ್ಕೆ 15 ದಿವಸವಾಯಿತು, 15 ದಿವಸಕ್ಕೆ ಇವರಲ್ಲಿ ಇರುವುದು ನಿಜವಾದಂಥ ಉತ್ತರವೇ ಇಲ್ಲ. ಕಂದಾಯ ಹಾಗೂ ಕಾನೂನು ಇಲಾಖೆಗಳನ್ನು ಹೊರತುಪಡಿಸಿ ಎಂದು ಹೇಳಿದ್ದಾರೆ. ಅವರು ಎಷ್ಟು ಜನ ಇದ್ದಾರೆ? ಆ ಅಂಕಿಅಂಶಗಳನ್ನು ಕೊಟ್ಟಿದ್ದರೆ ಚೆನ್ನಾಗಿತ್ತು, ಮಾನ್ಯ ಮುಖ್ಯ ಮಂತ್ರಿಗಳು ಕೊಟ್ಟಿಲ್ಲ. ಅದಕ್ಕಾಗಿ ಅವರು ಇದಕ್ಕೆ ನಿಗಾವಹಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ : ಉತ್ತರ ಕೊಟ್ಟಿದ್ದೇನೆ. ಕಂದಾಯ ಹಾಗೂ ಕಾನೂನು ಇಲಾಖೆಯ ಎರಡು ಬಿಟ್ಟು 197 ಎಂದು ಉತ್ತರಿಸಿದ್ದೇನೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಕಂದಾಯ ಇಲಾಖೆಯದ್ದು ಏಕೆ ಕೊಟ್ಟಿಲ್ಲ ಅದನ್ನು ಕೊಡಿ.

ಶ್ರೀ ಎಸ್.ಎಂ. ಕೃಷ್ಣ : ಮಾಹಿತಿ ಸಂಗ್ರಹಿಸಿ ಕಳುಹಿಸಿಕೊಡುತ್ತೇನೆ.

ಗೌರಿಬಿದನೂರು ತಾಲ್ಲೂಕಿನಲ್ಲಿ ಯು.ಜಿ.ಡಿ. ಯೋಜನೆ ಮಂಜೂರಾತಿ ಬಗ್ಗೆ

457 (4084) : ಶ್ರೀ ಎಸ್.ಹೆಚ್. ಶಿವಶಂಕರರೆಡ್ಡಿ (ಗೌರಿಬಿದನೂರು). : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ಯು.ಜಿ.ಡಿ. ಯೋಜನೆಯು ಪ್ರಸಕ್ತ ಸಾಲಿನಲ್ಲಿ ರಾಜ್ಯದ ಯಾವ ಯಾವ ತಾಲ್ಲೂಕುಗಳಲ್ಲಿ ಮಂಜೂರಾಗಿದೆ.

2) ಕೋಲಾರ ಜಿಲ್ಲಾ, ಗೌರಿಬಿದನೂರು ತಾಲ್ಲೂಕಿನಲ್ಲಿ ಈ ಯೋಜನೆ ಜಾರಿಯಾಗುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು):

ಅ) ಪ್ರಸಕ್ತ ಸಾಲಿನಲ್ಲಿ ಅರಸೀಕೆರೆ ಪಟ್ಟಣದ ಒಳ ಚರಂಡಿ ವ್ಯವಸ್ಥೆಯ ಅಭಿವೃದ್ಧಿಗಾಗಿ ರೂ. 56.7 ಲಕ್ಷಗಳ ಅಂದಾಜಿಗೆ ಮಂಜೂರಾತಿ ನೀಡಲಾಗಿದೆ.

ಆ) – ಇಲ್ಲ –

ಶ್ರೀ ಎಸ್.ಹೆಚ್. ಶಿವಶಂಕರರೆಡ್ಡಿ : ಮಾನ್ಯ ಅಧ್ಯಕ್ಷರೆ, ಉತ್ತರ ಒದಗಿಸಿದ್ದಾರೆ, ನನ್ನ ಕೋರಿಕೆ ಇಷ್ಟೆ, ಗೌರಿಬಿದನೂರಿನಲ್ಲಿ ಯುಜಿಡಿ ಯೋಜನೆಯನ್ನು ಮಾಡಬೇಕೆಂದು ಬಹಳ ವರ್ಷಗಳಿಂದ ಪ್ರಯತ್ನ ಇದೆ, ಈಗಾಗಲೇ ನಮ್ಮ ಕೋಲಾರ ಜಿಲ್ಲೆಯ ಕೆಲವು ಮುಖ್ಯ ಪಟ್ಟಣಗಳಾದ ಕೋಲಾರ, ಶೀಡ್ಲಘಟ್ಟ, ಚಿಂತಾಮಣಿಯಲ್ಲಿ ಆಗಿದೆ. ಹಾಗೆಯೇ ನಮ್ಮ ಗೌರಿಬಿದನೂರು ಕೂಡ ಬೃಹದಾಕಾರವಾಗಿ ಬೆಳೆಯುತ್ತಲಿದ್ದು ಈ ಯೋಜನೆಯ ಅಗತ್ಯವಿದೆ ಎನ್ನುವ ಮಾತನ್ನು ಹೇಳಿ. ಮಾನ್ಯ ಮಂತ್ರಿಗಳು ಮುಂದೆ ಏನಾದರೂ ಇದನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವೆ ಎನ್ನುವ ವಿಚಾರವನ್ನು ಕೇಳಬಯಸುತ್ತೇನೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಪೌರಾಡಳಿತ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ಯುಜಿಡಿ ಕಾರ್ಯಕ್ರಮ ಮಾಡುವುದಕ್ಕಿಂತ ಮೊದಲು ಅದಕ್ಕೆ ಮೂಲಭೂತವಾಗಿ ಕುಡಿಯುವ ನೀರಿನ, ಅಥವಾ ನೀರಿನ ವ್ಯವಸ್ಥೆ ಮಾಡತಕ್ಕಂಥದ್ದು ಬಹಳ ಅವಶ್ಯಕತೆಯಿದೆ. ಕುಡಿಯುವ ನೀರಿನ ಅಥವಾ ನೀರಿನ ಸಂಪೂರ್ಣ ವ್ಯವಸ್ಥೆ ಮಾಡಿ ಆದಮೇಲೆ ಈ ಯುಜಿಡಿ ಸ್ಕೀಂ ಅನ್ನು ಚಿಂತನೆ ಮಾಡತಕ್ಕಂಥದ್ದು ಆಗುತ್ತದೆ.

ಶ್ರೀ ಎಸ್.ಹೆಚ್. ಶಿವಶಂಕರರೆಡ್ಡಿ : ಆ ಯೋಜನೆಯನ್ನು ಕೂಡ ರೂಪಿಸುತ್ತಿದ್ದಾರೆನ್ನುವುದು ಗೊತ್ತಾಯಿತು. ದಯವಿಟ್ಟು ಅದರ ಜೊತೆಯಲ್ಲಿಯೇ ಈ ಯೋಜನೆಯನ್ನು ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.